**ಪಿ.ಸಿ. ನಂ.164/2025**

**ಸಿ.ಡಬ್ಲ್ಯು. 1**

(ದಿನಾಂಕ 23-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಫಿರ್ಯಾದಿಯ ಪ್ರಮಾಣೀಕೃತ ಹೇಳಿಕೆ**

ನಾನು ಈ ಪ್ರಕರಣದಲ್ಲಿ ಪಿರ್ಯಾದು ಸಂಸ್ಥೆಯ ನಿಶ್ವತ್ ಪಾಲುದಾರರಾಗಿದ್ದು, ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನಾನು ನನ್ನ ಫಿರ್ಯಾದಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ.

ಆರೋಪಿಯು ದಿನಾಂಕಃ31-12-2024ರಂದು ನೀಡಿರುವ ಚೆಕ್‌ನ್ನು ನಿ.ಪಿ.1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ.1ಎ ಎಂದು, ಬ್ಯಾಂಕನವರು ನೀಡಿರುವ ಹಿಂಬರಹವನ್ನು ನಿ.ಪಿ.2 ಎಂದು, ದಿನಾಂಕ:07-02-2025ರಂದು ಆರೋಪಿಗೆ ನೀಡಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ನಿ.ಪಿ.3 ಎಂದು, ಆರೋಪಿಗೆ ನೋಟಿಸ್ ನೀಡಿದ ಬಗ್ಗೆ ಅಂಚೆ ರಶೀದಿಯನ್ನು ನಿ.ಪಿ.4 ಎಂದು, ಆರೋಪಿಗೆ ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿ.ಪಿ.5 ಎಂದು, ಆರೋಪಿಯ ಸಹಿಯನ್ನು ನಿ.ಪಿ.5ಎ ಎಂದು, ದಿನಾಂಕಃ28-09-2024ರ Tax Invoice GST No.1799ರ ಪ್ರತಿಯನ್ನು ನಿಪಿ-6 ಎಂದು, ದಿನಾಂಕಃ10-03-2012ರಂದು ಆದ Partnership deedನ ಯಥಾ ನಕಲನ್ನು ನಿಪಿ-7 ಎಂದು, ಫಿರ್ಯಾದನ್ನು ನಿ.ಪಿ.8 ಎಂದು, ಫಿರ್ಯಾದಿಯಲ್ಲಿರುವ ಫಿರ್ಯಾದಿಯ ಸಹಿಗಳನ್ನು ನಿ.ಪಿ.8ಎ ಎಂದು ಗುರುತಿಸಲಾಯಿತು.

ನನ್ನ ಸಾಕ್ಷಿ ವಿಚಾರಣೆ ಹಾಗೂ ದಾಖಲಾತಿಗಳ ಆಧಾರದ ಮೇಲೆ ಫಿರ್ಯಾದಿಯಲ್ಲಿ ಕೇಳಿರುವಂತೆ ಆದೇಶವಾಗಲು ಪ್ರಾರ್ಥನೆ.

(ನಿ.ಪಿ.7ರ ಯಥಾ ನಕಲುಗಳನ್ನು ಮೂಲ ದಾಖಲಾತಿಯೊಂದಿಗೆ ತಾಳೆ ಮಾಡಿ ಪರಿಶೀಲಿಸಿದ ನಂತರದಲ್ಲಿ ಮೂಲ ದಾಖಲಾತಿಗಳನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಜೆ.ಎಂ.ಎಫ್.ಸಿ. ಕುಮಟಾ